ಆರ್.ಬಿ.ಐ. / 2007 – 2008 / 60
ಡಿ.ಸಿ.ಎಮ್(ಎನ್.ಇ) / 08.07.18/ 2007–08

ಎಲ್ಲ ಬ್ಯಾಂಕುಗಳ
ಅಧ್ಯಕ್ಷರು ಮತ್ತು ಕಾರ್ಯಕಾರಿ ನಿರ್ದೇಶಕರು/
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜುಲೈ 02, 2007

ಮಾನ್ಯರೇ,

ಪ್ರಧಾನ ಸುತ್ತೋಲೆ– ನೋಟು ಮತ್ತು ನಾಣ್ಯಗಳ ವಿನಿಮಯ ಸೌಲಭ್ಯವನ್ನು ಕುರಿತಂತೆ

ನಮ್ಮ ಪತ್ರ ಸಂ. ಡಿಸಿಎಮ್[ಎನ್ಇ]ಸಂ. ಜಿ–2/08.07.18/2002–03 ದಿನಾಂಕ ಜುಲೈ 5,2002ರ ಮೂಲಕ ಕಳುಹಿಸಿರುವ ನೋಟು ಮತ್ತು ನಾಣ್ಯಗಳ ವಿನಿಮಯ ಸೌಲಭ್ಯವನ್ನು ಕುರಿತಂತೆ ಇರುವ ಪ್ರಧಾನ ಸುತ್ತೋಲೆಯನ್ನು ದಯವಿಟ್ಟು ಗಮನಿಸಿ. ಈ ವಿಷಯಕ್ಕೆ ಸಂಬಂಧಪಟ್ಟಂತೆ ತಂದ ಬದಲಾವಣೆಗಳಿಂದಾಗಿ ನಾವು ಮತ್ತೊಂದು ಪರಿಷ್ಕೃತ ಪ್ರಧಾನ ಸುತ್ತೋಲೆಯನ್ನು ನಿಮ್ಮ ಅವಗಾಹನೆಗಾಗಿ ಮತ್ತು ಸಂಬಂಧಪಟ್ಟಲ್ಲಿ ಅಗತ್ಯ ಕ್ರಮಗಳಿಗಾಗಿ ಕಳುಹಿಸುತ್ತಿದ್ದೇವೆ. ಈ ಪ್ರಧಾನ ಸುತ್ತೋಲೆಯು ನಮ್ಮ ವೆಬ್‌ಸೈಟ್ www.rbi.org.in ನಲ್ಲಿ ದೊರೆಯುತ್ತದೆ.

ನಿಮ್ಮ ವಿಶ್ವಾಸಿ

ಸಹಿ/
(ಯು.ಎಸ್. ಪಾಲಿವಾಲ್)
ಮುಖ್ಯ ಮಹಾ ವ್ಯವಸ್ಥಾಪಕರು

**ಭಾರತೀಯ ರಿಸರ್ವ್ ಬ್ಯಾಂಕ್(ನೋಟು ಮರು ಪಾವತಿಯ) ನಿಯಮಗಳು,1975 (1980 ರವರೆಗೆ ಪರಿಷ್ಕೃತಗೊಂಡಂತೆ)– ಸಂಪೂರ್ಣ ಅಧಿಕಾರ ನೀಡುವಿಕೆ**

1 .[ಅ] ಯಾವುದೇ ವ್ಯಕ್ತಿಯು ತನ್ನಲ್ಲಿರುವ ಭಾರತ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಮುದ್ರಿಸಿರುವ ಕರೆನ್ಸಿ ನೋಟುಗಳನ್ನು ಕಳೆದುಕೊಂಡಿರಲಿ, ಕಳ್ಳತನಕ್ಕೊಳಗಾಗಿರಲಿ ಇಲ್ಲವೇ ಹರಿದುಹೋಗಿರಲಿ ಅಥವಾ ಅಸಮರ್ಪಕ ನೋಟಾಗಿರಲಿ, ಭಾರತ ಸರ್ಕಾರ ಅಥವಾ ಭಾರತೀಯ ರಿಸರ್ವ್ ಬ್ಯಾಂಕಿನಿಂದ ಆ ಹಣದ ಮೌಲ್ಯವನ್ನು ಹಕ್ಕಿನಿಂದ ಪಡೆಯಲು ಸಾಧ್ಯವಿಲ್ಲ, ಎಂಬುದು 1934ರ ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆಯ ಕಲಂ 28ನ್ನು ಕಲಂ 58 [2] ರೊಂದಿಗೆ ಓದಿಕೊಂಡಾಗ ಸ್ಪಷ್ಟವಾಗುತ್ತದೆ. ಆದರೂ ಕೆಲವೊಂದು ನೈಜ ಸಂದರ್ಭಗಳಲ್ಲಿ ಸಾರ್ವಜನಿಕರಿಗೆ ಉಂಟಾಗುವ ತೊಂದರೆಗಳನ್ನು ಸರಿಪಡಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಭಾರತ ಸರ್ಕಾರದ ಪೂರ್ವಾನುಮತಿಯ ಮೇರೆಗೆ ಪರಿಸ್ಥಿತಿ ಮತ್ತು ಸಂದರ್ಭದ ಮಿತಿಯನ್ನು ಪರಿಗಣಿಸಿ ಔದಾರ್ಯದ ಅಂಶವಾಗಿ ಆ ಕರೆನ್ಸಿ/ ಬ್ಯಾಂಕು ನೋಟುಗಳ ಮೌಲ್ಯವನ್ನು ಹಿಂತಿರುಗಿಸಬಹುದು.

[ಆ] ಸಾರ್ವಜನಿಕರ ಅನುಕೂಲ ಮತ್ತು ಉಪಯೋಗವನ್ನು ದೃಷ್ಟಿಯಲ್ಲಿಟ್ಟುಕೊಂಡು ಮೇಲಿನ ಸೌಕರ್ಯವನ್ನು ಎಲ್ಲರಿಗೂ ವಿಸ್ತರಿಸಲು ಎಲ್ಲ ಕರೆನ್ಸಿ ಚೆಸ್ಟ್‌ಗಳ ಶಾಖೆಗಳಿಗೂ ಭಾರತೀಯ ರಿಸರ್ವ್ ಬ್ಯಾಂಕ್ [ನೋಟು ಮರುಪಾವತಿ] ನಿಯಮ, 1975 [1980ರವರೆಗೆ ಪರಿಷ್ಕೃತಗೊಂಡಂತೆ] ರನ್ವಯ ಹರಿದ/ ವಿರೂಪಗೊಂಡ/ ದೋಷಪೂರಿತ ನೋಟುಗಳ ವಿನಿಮಯವನ್ನು ಮಾಡಿಕೊಡಲಾಗುತ್ತದೆ.

**'ತುಂಡಾದ ನೋಟು'ಗಳನ್ನು ಕುರಿತಂತೆ ಉದಾರ ವ್ಯಾಖ್ಯಾನ**

ವಿನಿಮಯ ಸೌಲಭ್ಯವನ್ನು ಶೀಘ್ರಗೊಳಿಸಲು ಈ ಕೆಳಗೆ ನಮೂದಿಸಿದ ರೀತಿಯ ಕೊಳೆಯ ನೋಟುಗಳನ್ನು ಎಲ್ಲ ಬ್ಯಾಂಕ್‌ನ ಶಾಖೆಗಳಲ್ಲೂ ಉಚಿತವಾಗಿ ಮಾಡಿಕೊಡಬೇಕು. ಇದಲ್ಲದೆ ಈ ಬ್ಯಾಂಕಿನ ಕೌಂಟರುಗಳಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕಾದ ಪಾವತಿಗಳನ್ನು ಮಾಡುವಾಗ ಮತ್ತು ಸಾರ್ವಜನಿಕ ಖಾತೆಗಳಿಗೆ ತುಂಬಬೇಕಾದ ಹಣವನ್ನು ತುಂಬುವಾಗ ಕೊಳೆಯ ನೋಟುಗಳಲ್ಲಿ ಮಾಡಬಹುದಾಗಿದೆ.

I. <u>ಒಂದಂಕಿಯ ನೋಟುಗಳು– ರೂ. 1/–, ರೂ.2/–, ರೂ5/–</u>
ವಿನಿಮಯಕ್ಕೆಂದು ನೀಡಲಾಗುವ ನೋಟುಗಳು ಎರಡು ತುಂಡಿಗಿಂತ ಹೆಚ್ಚಿರಬಾರದು. ನೋಟಿನ ಯಾವುದೇ ಅಗತ್ಯ ಲಕ್ಷಣಗಳು ಕಾಣೆಯಾಗಿರಬಾರದು ಮತ್ತು ಒಂದು ತುಂಡಿನಲ್ಲಾದರೂ ಸಂಪೂರ್ಣ ಸಂಖ್ಯೆಯು ಕಾಣುವಂತಿರಬೇಕು.

II. <u>ಎರಡಂಕಿಯ ನೋಟುಗಳು –ರೂ10/, ರೂ20/–, ರೂ50/–, ರೂ100/–, ರೂ500/–, ಮತ್ತು ರೂ1000/–</u>
ವಿನಿಮಯಕ್ಕೆಂದು ನೀಡಲಾಗುವ ನೋಟುಗಳು ಎರಡು ತುಂಡಿಗಿಂತ ಹೆಚ್ಚಿರಬಾರದು. ನೋಟಿನ ಯಾವುದೇ ಅಗತ್ಯ ಲಕ್ಷಣಗಳು ಕಾಣೆಯಾಗಿರಬಾರದು. ಎರಡೂ ತುಂಡುಗಳೂ ಒಂದೇ ನೋಟಿನದಾಗಿರಬೇಕು. ಅಂದರೆ ತುಂಡಾದ ಎರಡೂ ನೋಟುಗಳಲ್ಲಿ ಒಂದೇ ಸಂಖ್ಯೆ ಇರಬೇಕು.

ಈ ನೋಟುಗಳನ್ನು ಕೊಳೆಯ ನೋಟುಗಳೆಂದು ಪರಿಗಣಿಸಿ ಕೊಳೆಯ ನೋಟುಗಳೊಂದಿಗೆ ಇಡಬೇಕು. ಈ ಅಸಮರ್ಪಕ ನೋಟುಗಳನ್ನು ಯಾವುದೇ ಸಂದರ್ಭದಲ್ಲೂ ಮರುನೀಡಿಕೆಗೆ ಬಳಸಬಾರದು ಮತ್ತು ಅದನ್ನು ಕರೆನ್ಸಿ ಚೆಸ್ಟ್‌ಗಳಲ್ಲಿ ಜಮಾಮಾಡಿ ನಂತರ ರಿಸರ್ವ್ ಬ್ಯಾಂಕಿಗೆ ಚೆಸ್ಟ್ ರವಾನೆಯ ಜೊತೆಗೆ ಕಳುಹಿಸಬೇಕು.

**ವಿರೂಪಗೊಂಡ ನೋಟುಗಳ ನೀಡುವಿಕೆ ಮತ್ತು ಮಾನ್ಯ ಮಾಡುವಿಕೆ**

3. ವಿರೂಪಗೊಂಡ ನೋಟು ಅಂದರೆ ನೋಟಿನ ಒಂದು ಭಾಗ ಕಾಣೆಯಾಗಿರುವುದು ಅಥವಾ ತುಂಡುಗಳಿಂದ ಕೂಡಿರುವುದು. ಭಾರತೀಯ ರಿಸರ್ವ್ ಬ್ಯಾಂಕಿನ ನೀಡಿಕೆ ಕಚೇರಿಗಳಲ್ಲಾಗಲಿ ಅಥವಾ ವಾಣಿಜ್ಯಬ್ಯಾಂಕಿನ ನಿರ್ದಿಷ್ಟ ಶಾಖೆಗಳಲ್ಲಾಗಲೀ ನೋಟುಗಳನ್ನು ವಿನಿಮಯಕ್ಕಾಗಿ ನೀಡಬಹುದು. ಹಾಗೆ ವಿನಿಮಯಕ್ಕಾಗಿ ಬಂದ ನೋಟುಗಳನ್ನು ಮಾನ್ಯ ಮಾಡುವಾಗ 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳನ್ನು [1980ರ ವರೆಗೆ ಪರಿಷ್ಕೃತಗೋಂಡಂತೆ] ಅನ್ವಯಿಸಬೇಕು. ಈ ನಿಯಮಗಳು ಭಾರತೀಯ ರಿಸರ್ವ್ ಬ್ಯಾಂಕಿನ ವೆಬ್‌ಸೈಟ್ www.rbi.org.inನಲ್ಲಿ ಕಾಣಬಹುದು.

**ಪುಡಿ ಪುಡಿಯಾದ, ಸುಟ್ಟ, ಕರಕಲಾದ, ಅಂಟಿಕೊಂಡ ನೋಟುಗಳು**

4. ಅತ್ಯಂತ ಪುಡಿ ಪುಡಿಯಾದ ಸುಟ್ಟ, ಕರಕಲಾದ, ಬೇರ್ಪಡಿಸಲಾಗದಂತೆ ಒಂದಕ್ಕೊಂದು ಅಂಟಿಕೊಂಡ ನೋಟುಗಳು ಸಾಮಾನ್ಯ ರೀತಿಯಲ್ಲಿ ಉಪಯೋಗಿಸಲಾಗದ್ದರಿಂದ ಬ್ಯಾಂಕಿನ ಶಾಖೆಗಳು ಒಪ್ಪಿಕೊಳ್ಳುವುದಿಲ್ಲ.
ಅದಕ್ಕೆ ಬದಲಾಗಿ ಇಂತಹ ನೋಟುಗಳನ್ನು ಹೊಂದಿರುವವರು ಅವರಿಗೆ ಸಂಬಂಧಪಟ್ಟ ನೀಡಿಕೆ ಕಛೇರಿಗಳಲ್ಲಿ ನೀಡಬೇಕು. ಅಲ್ಲಿ ಅವುಗಳನ್ನು ವಿಶೇಷ ಕ್ರಮದ ಮೂಲಕ ಮೌಲ್ಯ ನಿರ್ಣಯ ಮಾಡಿಕೊಡಲಾಗುವುದು.

**“ಪಾವತಿಸಿ”/ “ಪಾವತಿಸಲಾಗಿದೆ”/ “ತಿರಸ್ಕರಿಸಿ” ಮುದ್ರೆಗಳನ್ನು ಹೊಂದಿದ ನೋಟುಗಳು**

5. ಪ್ರತಿಯೊಂದು ಶಾಖೆಯ ಮುಖ್ಯಸ್ಥರು, ಅಂದರೆ ಶಾಖೆಯ ವ್ಯವಸ್ಥಾಪಕರು ಮತ್ತು ಹಣಕಾಸು ಅಥವಾ ನಗದು ವಿಭಾಗದ ಮುಖ್ಯಸ್ಥರು ಈ ಸಂದರ್ಭಗಳಲ್ಲಿ” ಗೊತ್ತುಪಡಿಸಿದ ಅಧಿಕಾರಿ” ಯಾಗಲಿ ಕಾರ್ಯನಿರ್ವಹಿಸಿ ಪ್ರತಿಯೊಂದು ಶಾಖೆಗಳಲ್ಲಿ ವಿನಿಮಯಕ್ಕಾಗಿ ಬರುವ ನೋಟುಗಳ ಮೌಲ್ಯ ನಿರ್ಣಯವನ್ನು 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳನ್ನು [1980ರವರೆಗೆ ಪರಿಷ್ಕೃತಗೊಂಡಂತೆ] ಅನ್ವಯಿಸಿ ಮಾಡಬೇಕು. ವಿರೂಪಗೊಂಡ ನೋಟುಗಳ ಮೌಲ್ಯನಿರ್ಣಯವನ್ನು ಮಾಡಿದ ಮೇಲೆ ಗೊತ್ತುಪಡಿಸಿದ ಅಧಿಕಾರಿಯು ತಮ್ಮ ಆದೇಶವನ್ನು “ಪಾವತಿಸಿ”/ “ಪಾವತಿಸಲಾಗಿದೆ”/ “ತಿರಸ್ಕರಿಸಿ” ಮುದ್ರೆಗಳನ್ನು ಒತ್ತಿ ತಮ್ಮ ಸಹಿಯೊಂದಿಗೆ ಅಧಿಕೃತಗೊಳಿಸಬೇಕು. “ಪಾವತಿಸಿ” ಮತ್ತು “ತಿರಸ್ಕರಿಸಿ” ಎನ್ನುವ ಮುದ್ರೆಗಳೊಂದಿಗೆ ಬ್ಯಾಂಕು ಮತ್ತು ಶಾಖೆಯ ಹೆಸರುಗಳು ಇರಬೇಕು. ದೋಷಪೂರಿತ ನೋಟುಗಳು “ಪಾವತಿಸಿ”/ “ಪಾವತಿಸಲಾಗಿದೆ”[ “ತಿರಸ್ಕರಿಸಿ”] ಎನ್ನುವ ಭಾರತೀಯ ರಿಸರ್ವ್ ಬ್ಯಾಂಕಿನ ಯಾವುದೇ ಶಾಖೆಯ

ಮುದ್ರೆಯನ್ನು ಹೊಂದಿದ್ದು ಮತ್ತೊಮ್ಮೆ ವಿನಿಮಯಕ್ಕಾಗಿ ಕೇಳಿದರೆ ಆಗ ಅದನ್ನು 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳನ್ನು

[1980ರವರೆಗೆ ಪರಿಷ್ಕೃತ ಗೊಂಡಂತೆ] ಅನ್ವಯಿಸಿ ತಿರಸ್ಕರಿಸಬೇಕು ಮತ್ತು ಅಂತಹ ನೋಟುಗಳನ್ನು ಯಾವುದಾದರೂ ಗೊತ್ತುಪಡಿಸಿದ ಶಾಖೆಯಲ್ಲಿ ಯಾರಾದರೂ ಪಾವತಿಗಾಗಿ ಸಲ್ಲಿಸಿದರೆ ಆಗ ಅಂತಹ ದೋಷಪೂರಿತ ನೋಟುಗಳನ್ನು ಮಾನ್ಯ ಮಾಡಲಾಗುವುದಿಲ್ಲವೆಂದೂ ಮತ್ತು ಆ ನೋಟುಗಳ ಮೇಲೆ "ಪಾವತಿಸಿ"/ "ಪಾವತಿಸಲಾಗಿದೆ" ಎಂಬ ಮುದ್ರೆಯಿರುವುದರಿಂದ ಬೇರೆಡೆಯಲ್ಲಿ ಅದಕ್ಕೆ ಹಣ ಪಾವತಿಯಾಗಿರಬಹುದೆಂದು ತಿಳಿಯಲಾಗುತ್ತದೆ ಎಂಬುದನ್ನು ಅವರಿಗೆ ತಿಳಿಸಬೇಕು. ಎಲ್ಲಾ ಬ್ಯಾಂಕಿನ ಶಾಖೆಗಳಿಗೂ "ಪಾವತಿಸಿ"/ "ಪಾವತಿಸಲಾಗಿದೆ" ಎಂಬ ಮುದ್ರೆಯಿರುವ ನೋಟುಗಳನ್ನು ಸಾರ್ವಜನಿಕರಿಗೆ ಕಣ್ತಪ್ಪಿಯೂ ನೀಡಬಾರದೆಂದು ನಿರ್ದೇಶಿಸಲಾಗಿದೆ. ಶಾಖೆಗಳು ತಮ್ಮ ಗ್ರಾಹಕರಿಗೆ ಅಂತಹ ನೋಟುಗಳನ್ನು ಒಪ್ಪಿಕೊಂಡು ತೆಗೆದುಕೊಳ್ಳಬಾರದೆಂದೂ ಶಾಖೆಗಳು ತಮ್ಮ ಗ್ರಾಹಕರಿಗೆ ಎಚ್ಚರಿಕೆ ನೀಡಬೇಕು.

**ಘೋಷಣೆಗಳನ್ನು/ ರಾಜಕೀಯ ಸಂದೇಶಗಳನ್ನು ಹೊತ್ತ ನೋಟುಗಳು**

ಯಾವುದೇ ನೋಟಿನ ಮೇಲೆ ರಾಜಕೀಯ ಸ್ವರೂಪದ ಘೋಷಣೆಗಳನ್ನು ಮತ್ತು ಸಂದೇಶಗಳನ್ನು ಬರೆದಿದ್ದರೆ ಅಂತಹ ನೋಟುಗಳು ಶಾಸನಬದ್ಧ ಮೌಲ್ಯವನ್ನು ಕಳೆದುಕೊಳ್ಳುತ್ತವೆ ಮತ್ತು 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳಡಿಯಲ್ಲಿ [1980ರಲ್ಲಿ ಪರಿಷ್ಕೃತ ಗೊಂಡಂತೆ] ನಿಯಮ 5[2] ರನ್ನು ಅನ್ವಯಿಸಿ ಅಂತಹ ನೋಟುಗಳಿಗೆ ಹಕ್ಕು ಸಾಧನೆಯನ್ನು ತಿರಸ್ಕರಿಸಬೇಕು. ಹಾಗೆಯೇ ವಿರೂಪ
ಗೊಂಡ ನೋಟುಗಳನ್ನು 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳಡಿಯಲ್ಲಿ [1980ರವರೆಗೆ ಪರಿಷ್ಕೃತ ಗೊಂಡಂತೆ] ನಿಯಮ 5[2] ರನ್ನು ಅನ್ವಯಿಸಿ ತಿರಸ್ಕರಿಸಬೇಕು.

**ಉದ್ದೇಶಪೂರಕವಾಗಿ ತುಂಡುಮಾಡಲಾದ ನೋಟುಗಳು**

7. ನೋಟುಗಳು ಉದ್ದೇಶಪೂರಕವಾಗಿ ತುಂಡುಮಾಡಲಾಗಿದ್ದರೆ ಮತ್ತು ಅಕ್ರಮವಾಗಿ ತಿದ್ದಿದ್ದರೆ ಆಗ ಅಂತಹ ನೋಟುಗಳನ್ನು ವಿನಿಮಯಕ್ಕಾಗಿ ಪಾವತಿಸಲು ಕೇಳಿದರೆ ಅದನ್ನು 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳಡಿಯಲ್ಲಿ [1980ರವರೆಗೆ ಪರಿಷ್ಕೃತ ಗೊಂಡಂತೆ] ನಿಯಮ 5[2](ii) ರನ್ನು ಅನ್ವಯಿಸಿ ತಿರಸ್ಕರಿಸಬಹುದು. ಆದರೂ ಉದ್ದೇಶಪೂರಕವಾಗಿ ತುಂಡುಮಾಡಲಾದ ನೋಟುಗಳು ಎಂದು ನಿರ್ದಿಷ್ಟವಾಗಿ ಹೇಳುವುದು ಸ್ವಲ್ಪ ಕಷ್ಟವಾದರೂ ಅಂತಹ ನೋಟುಗಳನ್ನು ಹತ್ತಿರದಿಂದ ನೋಡಿದಾಗ ದುರುದ್ದೇಶಪೂರಕವಾಗಿ ತುಂಡುಮಾಡಿದ್ದೆಂದು ಗೋಚರವಾಗುತ್ತದೆ. ಆ ನೋಟುಗಳು ತುಂಡಾಗಿರುವ ರೀತಿಯಲ್ಲಿ, ಕಾಣೆಯಾದ ಭಾಗಗಳಲ್ಲಿ ಏಕ ರೂಪವಿದ್ದರೆ ಮತ್ತು ಅಂತಹ ನೋಟುಗಳನ್ನು ಹೆಚ್ಚಿನ ಸಂಖ್ಯೆ ಯಲ್ಲಿ ವಿನಿಮಯಕ್ಕಾಗಿ ನೀಡಿದರೆ ಅದನ್ನು ಉದ್ದೇಶ ಪೂರ್ವಕವಾಗಿ ತುಂಡು ಮಾಡಲಾದ ನೋಟುಗಳು ಎಂದು ಭಾವಿಸಬಹುದು. ಅಂತಹ ನೋಟುಗಳ ವಿವರಗಳನ್ನು – ಪಾವತಿದಾರನ ಹೆಸರು, ಪಾವತಿದಾರ ಮಂಡಿಸಿದ ನೋಟುಗಳ ಸಂಖ್ಯೆ ಮತ್ತು ನೋಟುಗಳ ವಿವಿಧ ಮೌಲ್ಯವರ್ಗ–

ಮುಂತಾದವನ್ನು ಅವರ ವ್ಯಾಪ್ತಿಯಲ್ಲಿ ಬರುವ ನೀಡಿಕೆ ವಿಭಾಗದ ಡೆಪ್ಯುಟಿ ಜನರಲ್ ಮ್ಯಾನೇಜರ್‌ರವರಿಗೆ ತದನಂತರ ಸಲ್ಲಿಸಬೇಕು. ಈ ರೀತಿ ಹೆಚ್ಚಿನ ಸಂಖ್ಯೆಯಲ್ಲಿ ತುಂಡಾದ ನೋಟುಗಳು ಪಾವತಿಯಾದಾಗ ಆ ಪ್ರದೇಶಕ್ಕೆ ಸಂಬಂಧಪಟ್ಟ ಪೋಲಿಸರ ಗಮನಕ್ಕೆ ಈ ವಿಷಯವನ್ನು ತರಬೇಕು. ದೋಷಪೂರಿತ ನೋಟುಗಳ ವಿನಿಮಯವನ್ನು ಖಾಸಗಿ ಹಣವಿನಿಮಯ ಮಾಡುವವರಾಗಲೀ, ಡೀಲರ್ ವೃತ್ತಿ ನಿರತರಾಗಲೀ ನಡೆಸದಂತೆ ಬ್ಯಾಂಕ್ ಶಾಕೆಗಳು ಎಚ್ಚರಿಕೆ ವಹಿಸಬೇಕು.

**ತರಬೇತಿ**

8. ನಮ್ಮ ನೀಡಿಕೆ ಕಚೇರಿಗಳಿಗೆ ಕರೆನ್ಸಿ ಚೆಸ್ಟ್ ಶಾಖೆಗಳು ಗೊತ್ತುಪಡಿಸಿದ ಅಧಿಕಾರಿಗಳಿಗೆ ಆದ್ಯತೆಯ ಮೇರೆಗೆ ತರಬೇತಿ ಕಾರ್ಯಕ್ರಮಗಳನ್ನು ನೀಡಬೇಕೆಂದು ನಿರ್ದೇಶನಗಳನ್ನು ಕಳುಹಿಸಲಾಗಿದೆ. 'ಗೊತ್ತು ಪಡಿಸಲಾದ ಅಧಿಕಾರಿಗಳು' ಎಂದು ಗುರುತಿಸಿದವರನ್ನು ಮಾತ್ರ ಈ ತರಬೇತಿ ಕಾರ್ಯಕ್ರಮ ಒಳಗೊಂಡಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ಇಂತಹ ತರಬೇತಿ ಕಾರ್ಯಕ್ರಮಗಳಿಂದ ಗೊತ್ತುಪಡಿಸಿದ ಅಧಿಕಾರಿಗಳಿಗೆ ದೋಷಪೂರಿತ ನೋಟುಗಳ ಬಗ್ಗೆ ಮೌಲ್ಯನಿರ್ಣಯ ಮಾಡಲು ಹೆಚ್ಚಿನ ತಿಳಿವು ಮತ್ತು ವಿಶ್ವಾಸವನ್ನು ಮೂಡಿಸಲು ಸಾಧ್ಯವಾಗುತ್ತದೆ. ನಿರ್ದಿಷ್ಟ ಶಾಖೆಗಳ ಗೊತ್ತುಪಡಿಸಿದ ಅಧಿಕಾರಿಗಳು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.

**ಸೂಚನಾಫಲಕದ ಪ್ರದರ್ಶನ**

9. ಎಲ್ಲ ಗೊತ್ತುಪಡಿಸಿದ ಬ್ಯಾಂಕ್ ಶಾಖೆಗಳೂ ತಮ್ಮ ಬ್ಯಾಂಕಿನ ಆವರಣದಲ್ಲಿ ಪ್ರಮುಖವಾದ ಜಾಗದಲ್ಲಿ ನೋಟು ವಿನಿಮಯ ಸೌಲಭ್ಯವು ಲಭ್ಯವಿದೆಯೆಂಬ ಫಲಕವನ್ನು "ವಿರೂಪಗೊಂಡ ನೋಟುಗಳನ್ನು ಸ್ವೀಕರಿಸುತ್ತೇವೆ ಮತ್ತು ಇಲ್ಲಿ ವಿನಿಮಯ ಮಾಡುತ್ತೇವೆ" ಎಂಬ ಶೀರ್ಷಿಕೆಯನ್ನು ಪ್ರದರ್ಶಿಸಬೇಕು. ಬ್ಯಾಂಕುಗಳು ತಮ್ಮ ಎಲ್ಲ ಗೊತ್ತುಪಡಿಸಿದ ಶಾಖೆಗಳೂ ನೋಟು ವಿನಿಮಯ ವ್ಯವಹಾರ ಮಾಡುವುದನ್ನು ಖಾತರಿಪಡಿಸಿಕೊಳ್ಳಬೇಕು.

**ರೂ 1000/– ಮೌಲ್ಯದ ನೋಟುಗಳ ಪರಿಚಯ**

ರೂ. 1000 ಮೌಲ್ಯದ ನೋಟುಗಳ ಪರಿಚಯದಿಂದಾಗಿ 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳಡಿಯಲ್ಲಿ [1980ರವರೆಗೆ ಪರಿಷ್ಕೃತ ಗೊಂಡಂತೆ] 'ಐದು ನೂರು ರೂಪಾಯಿ' ಎಂದು ಇರುವ ಕಡೆಗಳಲ್ಲಿ "ಒಂದು ಸಾವಿರ ರೂಪಾಯಿ" ಎಂಬುದನ್ನು ಬದಲಿಸಬೇಕು ಮತ್ತು ರೂ 500/–ಎಂದು ಇರುವ ಕಡೆಗಳಲ್ಲಿ ಅದರ ನಂತರದಲ್ಲಿ ರೂ1000/– ಎಂದು ಸೇರಿಸಬೇಕು. ಇದರಿಂದಾಗಿ ಎರಡಂಕಿಯಿಂದ ರೂ500/–ರವರೆಗೆ ವಿನಿಮಯಕ್ಕೆಂದು ಅನ್ವಯಿಸುತ್ತಿದ್ದ ನಿಯಮಗಳನ್ನೇ ರೂ1000/–ಕ್ಕೂ ಅನ್ವಯಿಸಬೇಕು. ಒಟ್ಟಿನಲ್ಲಿ ರೂ1000/–ದ ನೋಟುಗಳ ಮೌಲ್ಯನಿರ್ಣಯವನ್ನು ಮಾಡುವಾಗ 1975ರ ಭಾರತೀಯ ರಿಸರ್ವ್ ಬ್ಯಾಂಕ್‌ನ [ನೋಟು ಮರುಪಾವತಿ] ನಿಯಮಗಳಡಿಯಲ್ಲಿ [1980ರಲ್ಲಿ ಪರಿಷ್ಕೃತ ಗೊಂಡಂತೆ] –ರೂ10/,

ರೂ20/–, ರೂ50/–, ರೂ100/–, ರೂ500/–, ಗಳನ್ನು ವಿನಿಮಯ ಮಾಡುವಂತೆ ರೂ1000/– ಗಳಿಗೂ ಮೌಲ್ಯನಿರ್ಣಯ ಮಾಡಬಹುದು.

**ಕರೆನ್ಸಿ ಚೆಸ್ಟ್‌ಗಳಲ್ಲಿ ಮೌಲ್ಯನಿರ್ಣಯ ಮಾಡಿದ ನೋಟುಗಳನ್ನು ವಿಲೇವಾರಿ ಮಾಡುವ ಬಗ್ಗೆ.**

11. ನೀಡಿಕೆ ಕಚೇರಿಯ ವ್ಯಾಪ್ತಿಯೊಳಗೆ ಬರುವ ಕರೆನ್ಸಿ ಚೆಸ್ಟ್‌ಗಳಲ್ಲಿ ಮೌಲ್ಯನಿರ್ಣಯ ಮಾಡಿದ ನೋಟುಗಳ ಪೂರ್ತಿ ಮೌಲ್ಯ ನೀಡಲ್ಪಟ್ಟ ನೋಟುಗಳನ್ನು ಕರೆನ್ಸಿ ಚೆಸ್ಟ್‌ಗಳು ನೀಡಿಕೆ ಕಚೇರಿಗೆ ಮಾಸಿದ ನೋಟುಗಳ ರವಾನೆಯೊಂದಿಗೆ ಈಗಾಗಲೇ ತಿಳಿಸಿರುವ ನಿಯಮದಂತೆ ಕಳುಹಿಸಕೊಡಬೇಕು. ಕರೆನ್ಸಿ ಚೆಸ್ಟ್‌ಗಳ ಶಾಖೆಗಳ ನಗದು ಶಿಲ್ಕಿನಲ್ಲಿರುವ ಅರ್ಧ್ದ ಮೌಲ್ಯ ನೀಡಲ್ಪಟ್ಟ ನೋಟುಗಳು ಮತ್ತು ತಿರಸ್ಕರಿಸಿದ ನೋಟುಗಳನ್ನು ಪ್ರತ್ಯೇಕವಾಗಿ ಪೂರ್ಣ ಮೌಲ್ಯದ ನೋಟುಗಳೊಂದಿಗೆ ಸೇರಿಸಿ ಕಳುಹಿಸಬೇಕು ಅಥವಾ ಆಗಿಂದಾಗ್ಗೆ ಅಗತ್ಯ ಬಂದಂತೆ ಅದನ್ನು ರಿಜಿಸ್ಟರ್ಡ್ ಅಥವಾ ಇನ್‌ಶೂರ್ಡ್ ಅಂಚೆಯ ಮೂಲಕ ಕಳುಹಿಸಬೇಕು. ಪೂರ್ತಿ ಮೌಲ್ಯ ನೀಡಲ್ಪಟ್ಟ ನೋಟುಗಳನ್ನು, ನೀಡಿಕೆ ಕಚೇರಿಗೆ ಕಳುಹಿಸುವ ರವಾನೆಯೆಂದು ಮತ್ತು ಅರ್ಧ ಮೌಲ್ಯ ನೀಡಲ್ಪಟ್ಟ ಮತ್ತು ತಿರಸ್ಕರಿಸಿದ ನೋಟುಗಳನ್ನು ಮೌಲ್ಯನಿರ್ಣಯಕ್ಕಾಗಿ ಸಲ್ಲಿಸಿದ ಹಣವೆಂದು ಪರಿಗಣಿಸಿ ತದನುಸಾರ ಕ್ರಮ ಜರುಗಿಸಬೇಕು. ಎಲ್ಲ ಕರೆನ್ಸಿ ಚೆಸ್ಟ್‌ಗಳ ಶಾಖೆಗಳೂ ನಮ್ಮ ನೀಡಿಕೆ ಕಚೇರಿಗಳಿಗೆ ಮೌಲ್ಯನಿರ್ಣಯ ಮಾಡಿದ ನೋಟುಗಳನ್ನು ಕುರಿತ ಮಾಸಿಕ ವಿವರಣಾ ಪಟ್ಟಿಯನ್ನು ಕಳುಹಿಸಿ ಕೊಡಬೇಕು.

**ಬ್ಯಾಂಕಿನ ಶಾಖೆಗಳಲ್ಲಿ ನೋಟು ಮತ್ತು ನಾಣ್ಯಗಳ ವಿನಿಮಯ ಸೌಲಭ್ಯ**

12 [ಅ] ದೇಶದ ಎಲ್ಲಾಬ್ಯಾಂಕಿನ ಶಾಖೆಗಳೂ ಈ ಕೆಳಗಿನ ಗ್ರಾಹಕರ ಸೇವೆಯನ್ನು ಸಾರ್ವಜನಿಕರಿಗೆ ನೀಡುವಲ್ಲಿ ಹೆಚ್ಚು ಶೀಘ್ರವಾಗಿ ಮತ್ತು ಕ್ರಿಯಾಶಾಲಿಯಾಗಿ ವರ್ತಿಸಿದಲ್ಲಿ, ಈ ಉದ್ದೇಶಕ್ಕಾಗಿಯೇ ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಚೇರಿಯನ್ನು ಸಂಪರ್ಕಿಸುವ ಅಗತ್ಯ ಬರುವುದಿಲ್ಲ:

(i) ಎಲ್ಲ ಮೌಲ್ಯದ, ಹೊಸ ಹಾಗೂ ಒಳ್ಳೆಯ ಗುಣಮಟ್ಟದ, ನೋಟುಗಳು ಮತ್ತು ಎಲ್ಲಾಮೌಲ್ಯವರ್ಗದ ನಾಣ್ಯಗಳ ಬೇಡಿಕೆಯನ್ನು ಪೂರೈಸಲು

(ii) ಮಾಸಿದ ನೋಟುಗಳನ್ನು ವಿನಿಮಯ ಮಾಡಲು ಮತ್ತು

(iii) ನೋಟು ಮತ್ತು ನಾಣ್ಯಗಳನ್ನು ವ್ಯವಹಾರಕ್ಕಾಗಿ ಅಥವಾ ವಿನಿಮಯಕ್ಕಾಗಿ ಸ್ವೀಕರಿಸುವುದು.

[ಆ] ಗೊತ್ತುಪಡಿಸಿದ ಎಲ್ಲ ಬ್ಯಾಂಕಿನ ಶಾಖೆಗಳೂ ಹರಿದ / ವಿರೂಪಗೊಂಡ ನೋಟುಗಳಿಗೆ ವಿನಿಮಯ ಸೌಲಭ್ಯವನ್ನು ನೀಡಬೇಕು. ಅಂತಹ ಬ್ಯಾಂಕಿನ ಶಾಖೆಗಳ ಹೆಸರುಗಳು ಮತ್ತು ವಿಳಾಸಗಳು ಭಾರತೀಯ ರಿಸರ್ವ್ ಬ್ಯಾಂಕು ಮತ್ತು ಸಂಬಂಧಪಟ್ಟ ಬ್ಯಾಂಕುಗಳಲ್ಲಿ ದೊರೆಯುತ್ತವೆ. ಶಾಖೆಯಲ್ಲಿ ಇಂತಹ ಸೌಲಭ್ಯಗಳು ದೊರೆಯುವ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರ ಹೆಚ್ಚಿನ ಉಪಯೋಗಕ್ಕಾಗಿ ಪ್ರಕಟಿಸಬೇಕು.

[ಇ] ಯಾವುದೇ ಬ್ಯಾಂಕಿನ ಶಾಖೆಗಳು ಮತ್ತು ಅದರ ಸಿಬ್ಬಂದಿಗಳು ಅವರ ಕೌಂಟರ್‌ಗಳಲ್ಲಿ ಸಲ್ಲಿಸಲಾದ ಸಣ್ಣ ಮೌಲ್ಯದ ನೋಟು ಮತ್ತು ನಾಣ್ಯಗಳ ವಿನಿಮಯವನ್ನು ನಿರಾಕರಿಸುವಂತಿಲ್ಲ.

**ಭಾರತೀಯ ರಿಸರ್ವ್ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳ ನಡುವಣ ಒಪ್ಪಂದ**

13 [ಅ]. ಕರೆನ್ಸಿ ಚೆಸ್ಟ್ ಮತ್ತು/ ಅಥವಾ ಸಣ್ಣ ನಾಣ್ಯಗಳ ಡಿಪೋಗಳನ್ನು ಸ್ಥಾಪಿಸುವಾಗ ಭಾರತೀಯ ರಿಸರ್ವ್ ಬ್ಯಾಂಕು ಮತ್ತು ವಾಣಿಜ್ಯ ಬ್ಯಾಂಕುಗಳ ನಡುವಣ ಮಾಡಿಕೊಂಡ ಒಪ್ಪಂದದದನ್ವಯ ಬ್ಯಾಂಕಿನ ಶಾಖೆಗಳು ನೋಟುಗಳ, ವಿನಿಮಯಕ್ಕೆ ನಾಣ್ಯಗಳನ್ನು ಸ್ವೀಕರಿಸಬೇಕು. ಬ್ಯಾಂಕುಗಳು ತಮ್ಮ ಶಾಖೆಗಳಿಗೆ ಈ ಕೆಳಗಿನ ಸೇವೆಯನ್ನು ನೀಡಲು ನಿರ್ದೇಶಿಸಬೇಕು:

(i) ಸಾರ್ವಜನಿಕರಿಂದ ಯಾವುದೇ ಮೌಲ್ಯದ ನಾಣ್ಯಗಳನ್ನು ಯಾವ ನಿರ್ಬಂಧವನ್ನೂ ಹೇರದೇ ಸ್ವೀಕರಿಸಿ ಅದಕ್ಕೆ ಪ್ರತಿಯಾಗಿ ನೋಟುಗಳಲ್ಲಿ ವಿನಿಮಯವನ್ನು ನೀಡಬೇಕು.

(ii) ವಿನಿಮಯಕ್ಕಾಗಿ ನೋಟು ಎಣಿಕೆಯ ಯಂತ್ರಗಳನ್ನು ಬಳಸಬೇಕು ಅಥವಾ ನಾಣ್ಯಗಳು ಹೆಚ್ಚು ಸಂಖ್ಯೆಯಲ್ಲಿ ಬಂದಾಗ ಅವುಗಳನ್ನು ತೂಕ ಮಾಡಿ ಸ್ವೀಕರಿಸಬೇಕು.

(iii) ಸ್ವೀಕರಿಸಿದ ರೂಪಾಯಿ ನಾಣ್ಯಗಳನ್ನು 'ಚೆಸ್ಟ್‌ನ ಶಿಲ್ಕ್' ಆಗಿಯೂ ಮತ್ತು ಸಣ್ಣ ನಾಣ್ಯಗಳನ್ನು 'ಸಣ್ಣ ನಾಣ್ಯಗಳ ಡಿಪೋನ ಶಿಲ್ಕ್' ಆಗಿಯೂ ಪರಿಗಣಿಸಬೇಕು.

[ಆ] ಎಲ್ಲ ಬ್ಯಾಂಕುಗಳ ಶಾಖೆಗಳೂ ಅವರ ಕೌಂಟರುಗಳಲ್ಲಿ ವಿನಿಮಯಕ್ಕಾಗಿ ಅಥವಾ ಜಮೆಗಾಗಿ ಸಲ್ಲಿಸಲಾದ ಎಲ್ಲ ಮೌಲ್ಯದ ನಾಣ್ಯಗಳನ್ನು ಸ್ವೀಕರಿಸಬೇಕೆಂದು ಬ್ಯಾಂಕುಗಳು ತಮ್ಮ ಶಾಖೆಗಳಿಗೆ ನಿರ್ದೇಶಿಸಬೇಕು. ಅಂತಹ ನಾಣ್ಯಗಳು, ಅದರಲ್ಲೂ ವಿಶೇಷವಾಗಿ ಸಣ್ಣ ಮೌಲ್ಯದ ನಾಣ್ಯಗಳನ್ನು ತೂಕದ ಆಧಾರದ ಮೇಲೆಯೇ ಸ್ವೀಕರಿಸುವುದು ಸೂಕ್ತ. ಆದರೂ 100 ನಾಣ್ಯಗಳಿರುವ ಪಾಲಿಥಿನ್ ಕವರ್‌ಗಳಲ್ಲಿ ನಾಣ್ಯದ ಪೂರೈಕೆ ಮಾಡುವುದು ಗ್ರಾಹಕರಿಗೆ ಮತ್ತು ಕ್ಯಾಷಿಯರ್‌ಗಳಿಗೆ ತುಂಬಾ ಅನುಕೂಲಕರ. ಅಂತಹ ನಾಣ್ಯಗಳ ಕವರ್‌ಗಳನ್ನು ಕೌಂಟರ್‌ಗಳಲ್ಲಿಟ್ಟು ಗ್ರಾಹಕರಿಕೆ ದೊರಕುವ ಅನುಕೂಲ ಕಲ್ಪಿಸಬೇಕು.
ಈ ಸಂಬಂಧವಾಗಿ ಸೂಚನೆಯೊಂದನ್ನು ಬ್ಯಾಂಕಿನ ಆವರಣದ ಒಳಗೆ ಮತ್ತು ಹೊರಗೆ ಗ್ರಾಹಕರ ಮಾಹಿತಿಗಾಗಿ ಪ್ರದರ್ಶಿಸಬೇಕು. 5 ಪೈಸೆ, 10 ಪೈಸೆ, 20 ಪೈಸೆಯ ಅಲ್ಯೂಮಿನಿಯಮ್ ನಾಣ್ಯಗಳು, 10 ಪೈಸೆಯ ಅಲ್ಯೂಮಿನಿಯಮ್ ತಾಮ್ರದ ಸ್ಟೇನ್‌ಲೆಸ್‌ಸ್ಟೀಲ್ ನಾಣ್ಯಗಳು, 25 ಮತ್ತು 50 ಪೈಸೆಯ ಮತ್ತು 1 ರೂಪಾಯಿಯ ಕ್ಯೂಪ್ರೊನಿಕಲ್ ನಾಣ್ಯಗಳನ್ನು ಹಿಂತೆಗೆದುಕೊಂಡು ಟಂಕಸಾಲೆಗೆ ಜಮಾ ಮಾಡಬೇಕಾಗಿರುವುದರಿಂದ ಗ್ರಾಹಕರು ಕೌಂಟರ್‌ಗಳಲ್ಲಿ ಅದನ್ನು ಪಾವತಿ ಮಾಡುವಾಗ ಪ್ರತಿಯೊಂದು ಮೌಲ್ಯದ ಮತ್ತು ಲೋಹದ ನಾಣ್ಯಗಳನ್ನು ಪ್ರತ್ಯೇಕವಾಗಿ 100ರಂತೆ ಪ್ಯಾಕ್ ಮಾಡುವಂತೆ ವಿನಂತಿಸಿಕೊಳ್ಳಬಹುದು ಆದರೆ ಒತ್ತಾಯಿಸುವಂತಿಲ್ಲ. ಅದರಂತೆ ಪ್ರಸಕ್ತ ಚಾಲ್ತಿಯಲ್ಲಿರುವ 25 ಪೈಸೆ, 50 ಪೈಸೆ ಮತ್ತು ಒಂದು ರೂಪಾಯಿಯ ಸ್ಟೇನ್‌ಲೆಸ್‌ಸ್ಟೀಲ್ ನಾಣ್ಯಗಳನ್ನು, 2 ಮತ್ತು 5 ರೂಪಾಯಿಯ ಕೂಪ್ರೋನಿಕಲ್ ನಾಣ್ಯಗಳಿಗೂ ಇದೇ ವ್ಯವಸ್ಥೆಯನ್ನು ಅನುಸರಿಸಬೆಕು. ತೂಕದಲ್ಲಿ ಭಾರಿ ವ್ಯತ್ಯಾಸಗಳು ಕಂಡುಬಂದಲ್ಲಿ ನಾಣ್ಯ ಎಣಿಕೆಯ ಯಂತ್ರಗಳನ್ನು ಬಳಸಬಹುದು.

[ಇ] ಶಾಖೆಗಳಲ್ಲಿ ನಾಣ್ಯಗಳ ಕೊರತೆಯನ್ನು ನಿವಾರಿಸಲು 5, 10, 20 ಪೈಸೆಯ ಅಲ್ಯೂಮಿನಿಯಮ್ ನಾಣ್ಯಗಳನ್ನು, 10 ಪೈಸೆಯ ಅಲ್ಯೂಮಿನಿಯಮ್ ತಾಮ್ರದ ಸ್ಟೇನ್‌ಲೆಸ್‌ಸ್ಟೀಲ್ ನಾಣ್ಯಗಳನ್ನು, 20, 50 ಪೈಸೆಯ ಮತ್ತು 1 ರೂಪಾಯಿಯ ಕೂಪ್ರೋನಿಕಲ್ ನಾಣ್ಯಗಳನ್ನು ಮುಂಬೈ/ ಕೋಲ್ಕತ್ತ/ ಹೈದರಾಬಾದ್‌ನಲ್ಲಿರುವ ಭಾರತ ಸರ್ಕಾರದ ಟಂಕಸಾಲೆಗೆ ಪೂರ್ವ ಮಾಹಿತಿಯನ್ನು ಕೊಟ್ಟು ಕರೆನ್ಸಿ ಚೆಸ್ಟ್ ಮತ್ತು ಸಣ್ಣ ನಾಣ್ಯಗಳ ಡಿಪೋಗಳ ಮೂಲಕ [ ಇತರ ಬ್ಯಾಂಕು ಶಾಖೆಗಳ ಕರೆನ್ಸಿ ಚೆಸ್ಟ್ ಮತ್ತು ಸಣ್ಣ ನಾಣ್ಯಗಳ ಡಿಪೋಗಳನ್ನು ಜೋಡಣೆ ಮಾಡಿ ] ಚಾಲ್ತಿಯಲ್ಲಿರುವ ವಿಧಿ ವಿಧಾನಗಳನ್ವಯ ರವಾನೆ ಮಾಡಬಹುದು. 25 ಪೈಸೆ, 50 ಪೈಸೆ ಮತ್ತು 1 ರೂಪಾಯಿಯ ಸ್ಟೇನ್‌ಲೆಸ್ ನಾಣ್ಯಗಳು ಮತ್ತು ರೂ2/ ಮತ್ತು ರೂ5/ ರ ಮೌಲ್ಯದ ಕೂಪ್ರೋನಿಕಲ್ ನಾಣ್ಯಗಳನ್ನು ಮತ್ತೆ ಚಲಾವಣೆಗೆ ಸೇರಿಸಬೇಕಾಗಿದೆ. ಕರೆನ್ಸಿ ಚೆಸ್ಟ್ ಮತ್ತು ಸಣ್ಣ ನಾಣ್ಯಗಳ ಡಿಪೋಗಳಲ್ಲಿ ಬೇಡಿಕೆಯಿಲ್ಲದಿರುವ ಸಂದರ್ಭದಲ್ಲಿ ನಾಣ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಜಾಗವಿಲ್ಲದಿದ್ದಲ್ಲಿ ಆ ವಲಯಕ್ಕೆ ಸಂಬಂಧಿಸಿದ ನೀಡಿಕೆ ಇಲಾಖೆಯನ್ನು ನಾಣ್ಯ ರವಾನೆಗಾಗಿ ಸಂಪರ್ಕಿಸಬಹುದು.

[ಈ] ಬ್ಯಾಂಕುಗಳ ಪ್ರಾದೇಶಿಕ ವ್ಯವಸ್ಥಾಪಕರು/ ವಲಯ ವ್ಯವಸ್ಥಾಪಕರು ಶಾಖೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ಈ ಸಂಬಂಧವಾಗಿರುವ ಸಮಸ್ಯೆಗಳ ಪರಿಹಾರದ ಸ್ಥಿತಿಗತಿಯನ್ನು ಕೇಂದ್ರಕಚೇರಿಗೆ ವರದಿ ಮಾಡಬೇಕು. ಅಲ್ಲಿ ಅಂತಹ ವರದಿಗಳನ್ನು ಪುನಃ ಅಧ್ಯಯನ ಮಾಡಿದ ನಂತರ ಅಗತ್ಯವಿದ್ದೆಡೆಯಲ್ಲಿ ತ್ವರಿತ ಪರಿಹಾರ ಕ್ರಮವನ್ನು ಕೈಗೊಳ್ಳಬಹುದು.

ಉ] ಈ ಸಂಬಂಧವಾಗಿ ಯಾವುದೇ ಅನುಪಾಲನೆ ಚ್ಯುತಿ ಕಂಡುಬಂದಲ್ಲಿ ಅದನ್ನು ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳ ಉಲ್ಲಂಘನೆಯೆಂದು ಪರಿಗಣಿಸಲಾಗುವುದು.

**ಅನುಬಂಧ**

## ಪ್ರಧಾನ ಸುತ್ತೋಲೆ

ವಿಷಯ : ಪ್ರಧಾನ ಸುತ್ತೋಲೆ – ನೋಟು ಮತ್ತು ನಾಣ್ಯಗಳ ವಿನಿಮಯ ಸೌಲಭ್ಯ

ಪ್ರಧಾನ ಸುತ್ತೋಲೆಯಲ್ಲಿ ಸಂಗ್ರಹವಾಗಿರುವ ಸುತ್ತೋಲೆಗಳ ವಿವರಣಾ ಪಟ್ಟಿ

| | | |
|---|---|---|
| ಜಿ–67/08.07.18/96–97 | 18.02.1997 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು, 1975,<br>ಕರೆನ್ಸಿ ಚೆಸ್ಟ್‌ಗಳನ್ನು ನಿರ್ವಹಿಸಲು ಖಾಸಗಿ ಬ್ಯಾಂಕುಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ |
| ಜಿ–52/08.07.18/96–97 | 11.01.1997 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳಿಗೆ ದೋಷಪೂರಿತ ನೋಟುಗಳ ವಿನಿಮಯ ಮಾಡಲು ನೀಡಲಾಗಿರುವ ಪೂರ್ಣ ಅಧಿಕಾರ – ಪಾವತಿಸಿ/ ಪಾವತಿಸಲಾಗಿದೆ ಮುದ್ರೆ ಹೊಂದಿರುವ ನೋಟುಗಳ ವಿಲೇವಾರಿ |
| ಜಿ–24/08.01..01/96–97 | 03.12.1996 | ತುಂಡಾದ ನೋಟುಗಳ ಸ್ವೀಕೃತಿ ಮಾಡುವುದು– ಉದಾರೀಕರಣ |
| ಜಿ–64/08.07.18/95–96 | 18.05.1996 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ– ದೋಷಪೂರಿತ ನೋಟುಗಳ ವಿನಿಮಯ ಮಾಡುವುದರ ಬಗ್ಗೆ ಪ್ರಚಾರ ನೀಡಿಕೆ |
| ಜಿ–71/08.07.18/92–93 | 22.06.1993 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ– ದೋಷಪೂರಿತ ನೋಟುಗಳ ವಿನಿಮಯ ಮಾಡುವುದರ ಬಗ್ಗೆ ಪ್ರಚಾರ ನೀಡಿಕೆ |
| ಜಿ–83/ಸಿಎಲ್–1[ಪಿಎಸ್‌ಬಿ]– 91/92 | 06.05.1992 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಚೆಸ್ಟ್ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ |
| ಜಿ–74/ಸಿಎಲ್–[ಪಿಎಸ್‌ಬಿ] [ಜಿಇಎನ್] 90/91 | 05. 09. 1991 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ |

| | | |
|---|---|---|
| | | ಅಧಿಕಾರ |
| 5.5/ಸಿ ಎಲ್–1[ಪಿಎಸ್‌ಬಿ] – 90/91 | 25.09.1990 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ |
| 8/ಸಿಎಲ್–1[ಪಿಎಸ್‌ಬಿ] | 17.08.1990 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ |
| ಜಿ–123/ಸಿ ಎಲ್–1[ಪಿಸಿಬಿ]– 89/90 | 07.05.1990 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ [ತಿದ್ದುಪಡಿ] |
| ಜಿ–108/ಸಿಎಲ್–1[ಪಿಎಸ್‌ಬಿ] [ಜಿಇಎನ್] 89/90 | 03.04.1990 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು–1989–ರೂ.500/–ರ ಮೌಲ್ಯದ ನೋಟುಗಳು– ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಲ್ಲಿ ದೋಷಪೂರಿತ ನೋಟುಗಳ ವಿನಿಮಯ ಮಾಡುವುದು |
| ಜಿ–8/ಸಿಎಲ್–1[ಪಿಎಸ್‌ಬಿ] | 12.07.1989 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು – ಆರ್‌ಬಿಐನ ನೀಡಿಕೆ ಕಚೇರಿಗಳ 'ಕ್ಲೈಮ್ಸ್'ಗೆ ಎನ್ನುವ ಮುದ್ರೆ ಹೊತ್ತಿರುವ ದೋಷಪೂರಿತ ನೋಟುಗಳು |
| ಜಿ. 84/ಸಿಎಲ್.1[[ಪಿಎಸ್‌ಬಿ] 88/89 | 17.031989 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ನೋಟು ವಿನಿಮಯ ಅಧಿಕಾರ |
| ಜಿ. 66/ಸಿಎಲ್.1[[ಪಿಎಸ್‌ಬಿ] 88/89 | 09.02.1989 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳ ಶಾಖೆಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ – ತರಬೇತಿ |
| ಎಸ್.12/ಸಿಎಲ್.1[[ಪಿಎಸ್‌ಬಿ] 88/89 | 30.09.1988 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು– ಉದ್ದೇಶಪೂರ್ವಕವಾಗಿ ವಿರೂಪಗೊಂಡ ನೋಟುಗಳ ಮೌಲ್ಯನಿರ್ಣಯ |
| ಜಿ.134/ಸಿಎಲ್.1[[ಪಿಎಸ್‌ಬಿ] 87/89 | 25.05.1988 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳಡಿ ಪೂರ್ಣ ಅಧಿಕಾರ ನೀಡುವ ಯೋಜನೆಯನ್ನು ಅನುಷ್ಠಾನಗೊಳಿಸುವುದು |
| 192//ಸಿಎಲ್.1[[ಪಿಎಸ್‌ಬಿ] | 02.06.1987 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ |

| | | |
|---|---|---|
| 86/87 | | ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳಿಗೆ ನೀಡಲಾಗಿರುವ ಪೂರ್ಣ ಅಧಿಕಾರ |
| 189/ಸಿ ಎಲ್. 2/86/87 | 02.06.1987 | ಕರೆನ್ಸಿ ನೋಟುಗಳ ಮೇಲೆ ಸಂದೇಶ, ಘೋಷಣೆಗಳನ್ನು ಬರೆದು ವಿರೂಪಗೊಳಿಸಿರುವುದರ ಬಗ್ಗೆ |
| 185/ಸಿ ಎಲ್-1[ಪಿಎಸ್ಬಿ]-86/87 | 20.05.1987 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು- ಪಾವತಿಸಿ/ ತಿರಸ್ಕರಿಸಲಾಗಿದೆ ಮುದ್ರೆಯನ್ನು ದೋಷಪೂರಿತ ನೋಟುಗಳ ಮೇಲೆ ಹಾಕುವುದು |
| 173/ಸಿ ಎಲ್. 1/84/85 | 02.04.1985 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳ ಯೋಜನೆಯಡಿ ಸಾರ್ವಜನಿಕ ಬ್ಯಾಂಕುಗಳಿಗೆ ದೋಷಪೂರಿತ ನೋಟುಗಳನ್ನು/ ಅದರ ವಿಧಿ ವಿಧಾನವನ್ನು ಕುರಿತಂತೆ ನೀಡಲಾಗಿರುವ ಪೂರ್ಣ ಅಧಿಕಾರ |
| ಸಿವೈ. ಸಂ.1064/ಸಿ.ಎಲ್.1/76-77 | 09.08.1976 | ಮಾಸಿದ ಮತ್ತು ಸ್ವಲ್ಪ ಹರಿದ ನೋಟುಗಳನ್ನು ವಿನಿಮಯ ಮಾಡಲು ಸಾರ್ವಜನಿಕರಿಗೆ ನೀಡುವ ಸೌಲಭ್ಯ |
| ಸಿವೈ.ಸಂ. 386/08.07.13/2000-2001 | 16.11.2000 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು, 1975- ಸಾರ್ವಜನಿಕ/ಖಾಸಗಿ ವಲಯ ಬ್ಯಾಂಕುಗಳ ಚೆಸ್ಟ್ ಶಾಖೆಗಳಿಗೆ ನೋಟು ವಿನಿಮಯ ಮಾಡಲು ನೀಡಲಾಗಿರುವ ಅಧಿಕಾರ |
| ಜಿ-11/08.07.18/2001-02 | 02.11.2001 | ಆರ್‌ಬಿಐ [ನೋಟು ಮರುಪಾವತಿ] ನಿಯಮಗಳು, 1975-' ಸಾರ್ವಜನಿಕ/ಖಾಸಗಿ ವಲಯ ಬ್ಯಾಂಕುಗಳ ಶಾಖೆಗಳಿಗೆ ನೋಟು ವಿನಿಮಯ ಮಾಡಲು ನೀಡಲಾಗಿರುವ ಪೂರ್ಣ ಅಧಿಕಾರ |
| ಡಿಸಿಎಮ್[ಆರ್‌ಎಮ್‌ಎಮ್‌ಟಿ] ಸಂ.404/11.37.01/03-04 | 09.10.2003 | ನಾಣ್ಯಗಳನ್ನು ಸ್ವೀಕರಿಸುವುದು/ ನೋಟುಗಳನ್ನು ದೊರಕಿಸುವುದು |
| ಡಿಸಿಎಮ್(ಎನ್.ಇ)ನಂ.310/ 08.07.18/2003-04 | 19.01.2004 | ನೋಟು/ನಾಣ್ಯಗಳ ವಿನಿಮಯ ಸೌಲಭ್ಯ - ಸಾರ್ವಜನಿಕರಿಗಾಗಿ |
| ಡಿಸಿಎಮ್[ಆರ್‌ಎಮ್‌ಎಮ್‌ಟಿ] 1181 /11.37.01/2003-04 | 05.04.2004 | ನಾಣ್ಯಗಳನ್ನು ಸ್ವೀಕರಿಸುವ ಕುರಿತು |
| ಆರ್‌ಬಿಐ/2006-07/349/ ಡಿಸಿಎಮ್[ಎನ್‌ಇ] ಸಂ.7488/08.07.18/2006-07 | 25.04.2007 | ಸಣ್ಣ ಮೌಲ್ಯದ ನೋಟು ಮತ್ತು ನಾಣ್ಯಗಳನ್ನು ಸ್ವೀಕರಿಸುವ ಕುರಿತು |